


1/2/14 - X

ಬೆಂಗಳೂರಿನಲ್ಲಿ ಶುಕ್ರವಾರ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್) ಲೆಕ್ಕಾಧಿಕಾರಿಗಳ ಸಂಘದ ಡೈರಿ ಬಿಡುಗಡೆ ಸಮಾರಂಭದಲ್ಲಿ ಡಾ. ಅದಿತಿ ರಾಜ, ಪಂಕಜ್ ಕುಮಾರ್ ಪಾಂಡೆ ಮತ್ತು ಇಂಧನ ಸಚಿವ ಡಿ.ಕೆ. ಶಿವಕುಮಾರ್ ಉಪಸ್ಥಿತರಿದ್ದರು - X' Vijay Karnataka.

Vijay Karnataka.

# ನಾಳೆ ವಿದ್ಯುತ್ ವ್ಯತ್ಯಯ

**ಬೆಂಗಳೂರು:** ಮತ್ತಿಕೆರೆ ಉಪ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣೆ ಕಾರ್ಯ ಕೈಗೊಂಡಿರುವುದರಿಂದ ಫೆ.2ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 3ರವರೆಗೆ ನಗರದ ಕೆಲವೆಡೆ ವಿದ್ಯುತ್ ವಿತರಣೆಯಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ. ಪ್ರದೇಶಗಳು: ಆರ್.ಕೆ. ಗಾರ್ಡನ್, ಸಂಜೀವಪ್ಪ ಕಾಲೊನಿ, ಎಲ್.ಜಿ. ಹಳ್ಳಿ, ಗೌರಿ ಅಪಾರ್ಟ್‌ಮೆಂಟ್, ಪಂಪನಗರ, ಎಲ್‌ಐಸಿ ಕಾಲೊನಿ, ಮೋಹನ್‌ಕುಮಾರ್ ನಗರ, ಅಕ್ಕಯಪ್ಪ ಗಾರ್ಡನ್, ಡಾಲರ್ಸ್ ಕಾಲೊನಿ, ಆರ್‌ಎಂವಿ ಬಡವಣೆ, ಬಿ.ಕೆ. ನಗರ, ಕೆ.ಎನ್. ಬಡಾವಣೆ, ಯಶವಂತಪುರ 1ನೇ ಹಂತ, ಗೋಕುಲ, ಮತ್ತಿಕೆರೆ ಎಚ್‌ಎಂಟಿ ಮುಖ್ಯರಸ್ತೆಯ ಶೇ.60ರಷ್ಟು ಭಾಗಗಳು, ಕಮರ್ಷಿಯಲ್ ಏರಿಯಾ, ಎಸ್‌ಬಿಎಂ ಕಾಲೊನಿ, ಎಂಆರ್‌ಜೆ ಕಾಲೊನಿ, ಎಕೆ ಕಾಲೊನಿ, ಬೃಂದಾವನ ನಗರ, ವಿ.ಆರ್. ಲೇಔಟ್, ಜೆ.ಪಿ. ಪಾರ್ಕ್.

1/2/14

## ಕೂಡುಂಕುಳಂ ಮೊದಲ ಘಟಕ ವಿದ್ಯುತ್ ಉತ್ಪಾದನೆ?

ಚೆನ್ನೈ (ಐಎಎನ್‌ಎಸ್): ಕೂಡುಂಕುಳಂ ಅಣು ವಿದ್ಯುತ್ ಸ್ಥಾವರದಲ್ಲಿನ ಸಾವಿರ ಮೆಗಾವಾಟ್ ಸಾಮರ್ಥ್ಯದ ಮೊದಲ ಘಟಕದಲ್ಲಿ ಎರಡು–ಮೂರು ದಿನಗಳಲ್ಲಿ ವಿದ್ಯುತ್ ಉತ್ಪಾದನೆ ಶುರುವಾಗುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಮೊದಲ ಘಟಕದಲ್ಲಿ ಶೇ 75ರಷ್ಟು ವಿದ್ಯುತ್ ಉತ್ಪಾದನೆಗೆ ಅಣು ಇಂಧನ ಪ್ರಾಧಿಕಾರ ಅನುಮತಿ ನೀಡಿದ್ದು, ಜನವರಿ 29ರಂದು ಟರ್ಬೈನ್ ಸ್ಥಗಿತದಿಂದಾಗಿ ಒಂದು ವಾರದಿಂದ ವಿದ್ಯುತ್ ಉತ್ಪಾದನೆ ನಡೆಯುತ್ತಿಲ್ಲ. ಕೊನೆಯ ದಿನ 650 ಮೆಗಾವಾಟ್ ವಿದ್ಯುತ್ ಉತ್ಪಾದಿಸಲಾಗಿತ್ತು.

'ಹೊಸ ಸ್ಥಾವರಗಳಲ್ಲಿ ವಿದ್ಯುತ್ ಉತ್ಪಾದನೆ ಹೆಚ್ಚಿದರೆ ಟರ್ಬೈನ್ ಸ್ಥಗಿತಗೊಳ್ಳುವುದು ಸಾಮಾನ್ಯ. ಈ ವೇಳೆ ಟರ್ಬೈನ್ ಜತೆಗೆ ಇತರ ಕಾರ್ಯ ನಡೆಸಲಾಗುತ್ತದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

1/2/14 VIJAYA VANI

■ ಇಂಧನ ಇಲಾಖೆ ಬಾಕಿ ಪ್ರಸ್ತಾವಗಳ ಪರಿಶೀಲನೆ

# ದಿಲ್ಲಿಯಲ್ಲಿ ಪ್ರತ್ಯೇಕ ಕಚೇರಿ




ಕೆಪಿಟಿಸಿಎಲ್ ಅಕೌಂಟ್ಸ್ ಆಫೀಸರ್ಸ್ ಸಂಘ ಹೊರತಂದಿರುವ 2014ರ ಫೈನಾನ್ಸ್ ಡೈರಿಯನ್ನು ಶುಕ್ರವಾರ ನಡೆದ ಸಮಾರಂಭದಲ್ಲಿ ಇಂಧನ ಸಚಿವ ಡಿ.ಕೆ. ಶಿವಕುಮಾರ್ ಬಿಡುಗಡೆ ಮಾಡಿದರು.

**ಬೆಂಗಳೂರು:** ಕೇಂದ್ರ ಸರ್ಕಾರದಲ್ಲಿ ಇಂಧನ ಇಲಾಖೆ ಬಾಕಿ ಪ್ರಸ್ತಾವನೆಗಳ ಅನುಮತಿ ಬಗ್ಗೆ ಪರಿಶೀಲಿಸಲು ದೆಹಲಿಯಲ್ಲಿಯೇ ಪ್ರತ್ಯೇಕ ಸುಸಜ್ಜಿತ ಕಚೇರಿ ಪ್ರಾರಂಭ ಮಾಡುವುದಾಗಿ ಇಂಧನ ಸಚಿವ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಕೆಪಿಟಿಸಿಎಲ್ ಲೆಕ್ಕಾಧಿಕಾರಿಗಳ ಸಂಘ ಶುಕ್ರವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಡೈರಿ ಬಿಡುಗಡೆ ಮಾಡಿ ಮಾತನಾಡಿ, ಸಮರ್ಥ ವಾದ 10 ಅಧಿಕಾರಿಗಳ ತಂಡ ದೆಹಲಿಯಲ್ಲಿರುವಂತೆ ವ್ಯವಸ್ಥೆ ಮಾಡಲಾಗುವುದು ಎಂದರು.

ಕಲ್ಲಿದ್ದಲು ಸೇರಿದಂತೆ ನೈಸರ್ಗಿಕ ಸಂಪನ್ಮೂಲಗಳನ್ನು ರಾಜ್ಯಕ್ಕೆ ಪಡೆದುಕೊಳ್ಳಲು ಸಾಧ್ಯವಾಗಿಲ್ಲ. ಕಳೆದ ನಾಲ್ಕೈದು ವರ್ಷಗಳಲ್ಲಿ ಕೇಂದ್ರ ಸರ್ಕಾರದ ನೆರವು ಪಡೆಯುವಲ್ಲಿ ರಾಜ್ಯ ಸರ್ಕಾರ ಎಡವಿದ್ದರಿಂದ ಇಂದು ವಿದ್ಯುತ್ ಸಮಸ್ಯೆಗಳನ್ನು ಎದುರಿಸುವಂತಾಗಿದೆ ಎಂದರು.

> ಸತತ ರಾಜಕೀಯ ಪರಿಶ್ರಮದಿಂದಾಗಿ ನಾನು ಈ ಮಟ್ಟಕ್ಕೆ ಬೆಳೆಯಲು ಸಾಧ್ಯವಾಗಿದೆ. ಏನೂ ಕೆಲಸ ಮಾಡದವರು ಯಾವ ತಪ್ಪು ಮಾಡುವುದಿಲ್ಲ. ಹೆಚ್ಚು ಶಕ್ತಿಯುತವಾಗಿ ಬೆಳೆಯುವಾಗ ಹೆಚ್ಚು ವಿರೋಧಿಗಳನ್ನು ಎದುರಿಸಬೇಕಾಗುತ್ತದೆ. ಇದೆಲ್ಲವೂ ವಿದ್ಯಾರ್ಥಿ ಜೀವನದಿಂದಲೇ ನನಗೆ ಅನುಭವವಾಗಿದೆ.
>
> । ಡಿ.ಕೆ. ಶಿವಕುಮಾರ್, ಇಂಧನ ಸಚಿವ

ದಕ್ಷಿಣ ರಾಜ್ಯಗಳಿಗೆ ಹೋಲಿಸಿದರೆ ಪ್ರತಿ ವರ್ಷ 25 ಸಾವಿರ ಕೋಟಿ ರೂ.ಗಳ ವಹಿವಾಟು ನಡೆಸುತ್ತಿರುವ ಇಂಧನ ಇಲಾಖೆಯು ಉತ್ತಮ ಸ್ಥಿತಿಯಲ್ಲಿ ಕಾರ್ಯ ನಿರ್ವಹಣೆ ಮಾಡುತ್ತಿದೆ. ಇನ್ನಷ್ಟು ಸಮರ್ಥವಾಗಿ ಕಾರ್ಯ ನಿರ್ವಹಿಸುವಂತಾಗಲು, ಇಲಾಖೆಯ ಲೋಪದೋಷಗಳನ್ನು ಸರಿಪಡಿಸುವತ್ತ ಗಮನ ನೀಡಲಾಗುವುದು ಎಂದರು.

**ಲಾಬಿಗೆ ಮಣಿಯಲಾರೆ:** ಇಲಾಖೆಯೊಳಗೆ ಕೆಲವರದ್ದೆ ಲಾಬಿ ನಡೆಯುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಎಲ್ಲ ಕ್ಷೇತ್ರಗಳಲ್ಲೂ ಹೊಸಬರು ಬರಲು ಅವಕಾಶವಾಗಬೇಕು. ಇನ್ನು ಮುಂದೆ ಅನಗತ್ಯ ವಿವಾದ ಸೃಷ್ಟಿ ಮಾಡಿ, ಯೋಜನೆಗೆ ಅಡ್ಡಿಯಾಗುವಂತೆ ಲಾಬಿ ಮಾಡುವ ಗುತ್ತಿಗೆದಾರರ ಲಾಬಿಗೆ ಮಣಿಯುವುದಿಲ್ಲ ಎಂದು ತಿಳಿಸಿದರು.

ಬೆಸ್ಕಾಂ ಎಂಡಿ ಪಂಕಜ್‌ಕುಮಾರ್ ಪಾಂಡೆ, ಹಣಕಾಸು ನಿರ್ದೇಶಕ ಬಿ.ಎಲ್. ಗುರುಪ್ರಸಾದ್, ತಾಂತ್ರಿಕ ನಿರ್ದೇಶಕ ನಾಗೇಶ್, ಕೆಪಿಟಿಸಿಎಲ್ ಹಣಕಾಸು ನಿರ್ದೇಶಕಿ ಡಾ. ಅದಿರಾಜ್, ಲೆಕ್ಕಾಧಿಕಾರಿಗಳ ಸಂಘದ ಅಧ್ಯಕ್ಷ ವಿ.ಜಿ.ಪಂಡಿತ್, ಪ್ರಧಾನ ಕಾರ್ಯದರ್ಶಿ ಕೆ. ರಾಮಚಂದ್ರರೆಡ್ಡಿ ಹಾಜರಿದ್ದರು.

Page ಉದಯವಾಣಿ, 1/2/14

# ಕೇಜ್ರಿವಾಲ್‌ಗೇ ಶಾಕ್!

■ ದಿಢೀರ್ ದರ ಏರಿಸಿ ವಿದ್ಯುತ್ ಕಂಪನಿಗಳಿಂದ ಪವರ್ ಪಾಲಿಟಿಕ್ಸ್

■ ಬಿಲ್ ಬಾಕಿ: ದಿಲ್ಲಿಯಲ್ಲಿ 10 ತಾಸು ವಿದ್ಯುತ್ ಕಡಿತ ಎಚ್ಚರಿಕೆ

ನವದೆಹಲಿ: ದೆಹಲಿಯಲ್ಲಿ ಅಕ್ಷರಶಃ ಪವರ್ ಪಾಲಿಟಿಕ್ಸ್ ಆರಂಭವಾಗಿದೆ. ಅಧಿಕಾರಕ್ಕೆ ಬಂದರೆ ವಿದ್ಯುತ್ ಬಿಲ್ ಅನ್ನು ಶೇ.50ರಷ್ಟು ಕಡಿತ ಮಾಡುವುದಾಗಿ ಹೇಳಿದ್ದ ಅರವಿಂದ್ ಕೇಜ್ರಿವಾಲ್ ನೇತೃತ್ವದ ಆಮ್‌ಆದ್ಮಿ ಸರ್ಕಾರಕ್ಕೆ ಇದೀಗ ಸ್ವತಃ ವಿದ್ಯುತ್ ವಿತರಣಾ ಕಂಪನಿಗಳು ಶಾಕ್ ನೀಡಿವೆ.

ಶನಿವಾರದಿಂದಲೇ ಜಾರಿಗೆ ಬರುವಂತೆ ಅವು ಸರ್‌ಚಾರ್ಜ್ ಅನ್ನು ಶೇ.8 ವರೆಗೂ ಏರಿಸಿವೆ. ಮತ್ತೊಂದೆಡೆ ಶುಕ್ರವಾರದೊಳಗೆ ಬಾಕಿ ಇರುವ ಬಿಲ್ ಪಾವತಿ ಮಾಡದೇ ಹೋದಲ್ಲಿ ಪೂರೈಕೆ ಸ್ಥಗಿತಗೊಳಿಸುವುದಾಗಿ ದೆಹಲಿಯ ಒಟ್ಟು ಬೇಡಿಕೆಯ ಶೇ.50ರಷ್ಟು ಪೂರೈಸುವ ಎನ್‌ಟಿಪಿಸಿ ಎಚ್ಚರಿಕೆ ನೀಡಿದೆ. ವಿದ್ಯುತ್ ಕಂಪನಿಗಳ ಈ ನಿರ್ಧಾರದಿಂದಾಗಿ ಸಿಎಂ ಕೇಜ್ರಿವಾಲ್ ಹೊಸ ಸಂಕಷ್ಟಕ್ಕೆ ಸಿಕ್ಕಿ ಹಾಕಿಕೊಂಡಿದ್ದಾರೆ. ಈ ನಡುವೆ ವಿದ್ಯುತ್ ಬೆಲೆ ಇಳಿಸಲಾ



ವಿದ್ಯುತ್ ಕಂಪನಿಗಳ ಲೆಕ್ಕಪತ್ರದ ಮೇಲೆ ಕಣ್ಣಿಟ್ಟಿದ್ದಕ್ಕಾಗಿ ಅವು 'ಪ್ರತೀಕಾರ ಕ್ರಮ' ಕೈಗೊಳ್ಳುತ್ತಿವೆ. ವಿದ್ಯುತ್ ಪೂರೈಸದಿದ್ದರೆ ಅವುಗಳ ಲೈಸೆನ್ಸ್ ರದ್ದು ಮಾಡುತ್ತೇವೆ.

● **ಕೇಜ್ರಿವಾಲ್**, ದಿಲ್ಲಿ ಸಿಎಂ

ಹಿನ್ನೆಲೆಯಲ್ಲಿ ದರ ಏರಿಕೆ ಮಾಡುವ ಕಂಪನಿಗಳ ನಿರ್ಧಾರವನ್ನು ದೆಹಲಿ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗ ಸಹ ಮಾನ್ಯ ಮಾಡಿದೆ. ಹೀಗಾಗಿ

## ಕೇಜ್ರಿ ಭ್ರಷ್ಟ ಪಟ್ಟಿಯಲ್ಲಿ ಬಿಎಸ್‌ವೈ, ಎಚ್‌ಡಿಕೆ, ಮೊಯ್ಲಿ, ಅನಂತ್

■ ಮೋದಿ, ರಾಹುಲ್ ಗಾಂಧಿ ಸೇರಿ 29 ಮಂದಿ ಹೆಸರು

■ ಈ ಎಲ್ಲರ ವಿರುದ್ಧ ಆಮ್ ಆದ್ಮಿ ಅಭ್ಯರ್ಥಿಗಳು ಕಣಕ್ಕೆ

ನವದೆಹಲಿ: ಲೋಕಸಭೆ ಚುನಾವಣೆ ಜ್ವರ ನಿಧಾನವಾಗಿ ಹೆಚ್ಚಾಗುತ್ತಿರುವಾಗಲೇ ಆಮ್ ಆದ್ಮಿ ಪಕ್ಷದ ನಾಯಕ ಅರವಿಂದ ಕೇಜ್ರಿವಾಲ್ ಅವರು ದೇಶದ ಭ್ರಷ್ಟ ರಾಜಕಾರಣಿಗಳ ಪಟ್ಟಿ ಬಿಡುಗಡೆ ಮಾಡಿದ್ದಾರೆ. ಆ ಎಲ್ಲರ ವಿರುದ್ಧ ಅಭ್ಯರ್ಥಿಗಳನ್ನು ಸಚಿವ ವೀರಪ್ಪ ಮೊಯ್ಲಿ ಹಾಗೂ ಮಾಜಿ ಸಚಿವ ಅನಂತ ಕುಮಾರ್ ಅವರ ಹೆಸರೂ ಇದೆ.

ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಮಂಡಳಿ ಸಭೆಯಲ್ಲಿ ಶುಕ್ರವಾರ ಮಾತನಾಡಿದ ಕೇಜ್ರಿವಾಲ್, ಭ್ರಷ್ಟ ರಾಜಕಾರಣಿಗಳ ಪಟ್ಟಿಯನ್ನು

Vijay Karnataka

ಆಪ್ ಎಫೆಕ್ಟ್: ವಿದ್ಯುತ್ ಖರೀದಿಗೆ ಹಣವಿಲ್ಲವಾದ್ದರಿಂದ ಈ ಕ್ರಮ ಎಂದ ಬಿವೈಪಿಎಲ್

# ಅಂದು ಬಿಲ್ ಕಟ್, ಇಂದು ಪವರ್ ಕಟ್

■ **ಪಿಟಿಐ** ಹೊಸದಿಲ್ಲಿ

ಮನೆಬಳಕೆ ವಿದ್ಯುತ್ ಶುಲ್ಕದಲ್ಲಿ ಅರ್ಧದಷ್ಟು ಇಳಿಸಿದ್ದ ದಿಲ್ಲಿಯ ಅರವಿಂದ್ ಕೇಜ್ರಿವಾಲ್ ಸರಕಾರದ ಕ್ರಮ ಈಗ ತಿರುಗು ಬಾಣವಾಗಿ ಪರಿಣಮಿಸಿದೆ. ಸರಕಾರ ತುರ್ತಾಗಿ ಏನಾದರೂ ಮಾಡದೇ ಹೋದರೆ, ಪ್ರತಿದಿನ 10 ಗಂಟೆ ಪವರ್ ಕಟ್‌ನಿಂದ ದಿಲ್ಲಿ ಜನ ತೊಂದರೆಗೆ ಸಿಲುಕುವುದು ಅನಿವಾರ್ಯವಾಗಲಿದೆ.

''ವಿದ್ಯುತ್ ಖರೀದಿಗೆ ತನ್ನಲ್ಲಿ ಹಣವಿಲ್ಲದ ಕಾರಣ ಪೂರ್ವ ಮತ್ತು ಕೇಂದ್ರ ದಿಲ್ಲಿಯದ್ಯಾಂತ ಶನಿವಾರದಿಂದ ಪ್ರತಿದಿನ 10 ಗಂಟೆ ವಿದ್ಯುತ್ ಸ್ಥಗಿತಗೊಳಿಸಲಾಗುವುದು,'' ಎಂದು ಸರಬರಾಜು ಕಂಪನಿ ಬಿವೈಪಿಎಲ್ ತಿಳಿಸಿದೆ.

ಬಿವೈಪಿಎಲ್ ಕಂಪನಿಯು ಸರಕಾರಿ ಸ್ವಾಮ್ಯದ ಎನ್‌ಟಿಪಿಸಿ ಮತ್ತು ಎನ್‌ಎಚ್‌ಪಿಸಿ ಕಂಪನಿಗಳಿಂದ ವಿದ್ಯುತ್ ಅನ್ನು ಖರೀದಿಸಿ ದಿಲ್ಲಿಗೆ ಸರಬರಾಜು ಮಾಡುತ್ತದೆ. ವಿದ್ಯುತ್ ದರ ಇಳಿಕೆಯಾದ ಕಾರಣ ಬಿವೈಪಿಎಲ್ ಕಂಪನಿಗೆ ನಷ್ಟ ಉಂಟಾಗಿದೆ. ಹೀಗಾಗಿ ಡಿಸೆಂಬರ್ ತಿಂಗಳಿನಲ್ಲಿ ಎನ್‌ಟಿಪಿಸಿ ಮತ್ತು ಎನ್‌ಎಚ್‌ಪಿಸಿ ಕಂಪನಿಗಳಿಗೆ ಕೊಡಬೇಕಾದ ಸುಮಾರು 200 ಕೋಟಿ ರೂ. ಬಾಕಿ ಉಳಿಸಿಕೊಂಡಿತ್ತು. ಬಾಕಿ ಚುಕ್ತಾ ಮಾಡದೆ ವಿದ್ಯುತ್ ಕೊಡುವುದಿಲ್ಲ ಎಂದು ಈ ಕಂಪನಿಗಳು ಪಟ್ಟು ಹಿಡಿದಿದ್ದವು. ಈ ಬಗ್ಗೆ ಸರಕಾರಕ್ಕೆ ಪತ್ರ ಬರೆದಿದ್ದ ಬಿವೈಪಿಎಲ್, ನೆರವು ನೀಡುವಂತೆ ಮನವಿ ಮಾಡಿತ್ತು. ಆದರೆ ಬಾಕಿ ಹಣ ಚುಕ್ತಾ ಮಾಡುವುದನ್ನು ಬಿಟ್ಟು ಕಂಪನಿಗಳಿಗೆ ಕೇಜ್ರಿವಾಲ್ ಸರಕಾರ ಧಮಕಿ ಹಾಕಿತ್ತು. ವಿದ್ಯುತ್ ಪೂರೈಕೆ ನಿಲ್ಲಿಸಿದರೆ ಪರವಾನಗಿ ರದ್ದುಮಾಡುವ ಬೆದರಿಕೆ ಹಾಕಿತ್ತು. ಇದರ ಮಧ್ಯೆಯೂ, ಜನವರಿ ತಿಂಗಳ ಪೂರ್ತಿ ವಿದ್ಯುತ್ ಪೂರೈಸಿದ ಸದರಿ ಕಂಪನಿಗಳು, ಶನಿವಾರದಿಂದ ದಿಲ್ಲಿಯ ಬಹುತೇಕ ಭಾಗಗಳಿಗೆ ವಿದ್ಯುತ್ ಸರಬರಾಜು ಸ್ಥಗಿತಗೊಳಿಸಲು ನಿರ್ಧರಿಸಿವೆ.


**ಪೇಪರ್ ಮೂಲಕ ಸ್ಮಾರ್ಟ್‌ಫೋನ್‌ನಲ್ಲಿ ಟಿವಿ ನೋಡಿ!**






ಆ್ಯಪಲ್, ಬಿಬಿ, ಆಂಡ್ರಾಯ್ಡ್, ಸಿಂಬಿಯಾನ್, ವಿಂಡೋಸ್ ಮೊಬೈಲ್‌ಗಳ ಆ್ಯಪ್ ಸ್ಟೋರ್‌ನಿಂದ ಅಥವಾ 18001023324 ಗೆ ಮಿಸ್ ಕಾಲ್ ನೀಡಿ ಇಲ್ಲವೇ alive.in ನಿಂದ ALIVE App ಡೌನ್‌ಲೋಡ್ ಮಾಡಿಕೊಳ್ಳಿ, ಅದನ್ನು ಓಪನ್ ಮಾಡಿ, ಮೊಬೈಲ್ ಕ್ಯಾಮೆರಾವನ್ನು ಈ ಚಿತ್ರದ ಮೇಲೆ ಹಿಡಿದು ಸ್ಕ್ಯಾನ್ ಮಾಡಿ. ನಿಮ್ಮ ಫೋನ್‌ನಲ್ಲಿ ಈ ವೀಡಿಯೋ ನೋಡಬಹುದು.


## ವಿದ್ಯುತ್ ದರ ಏರಿಕೆ

**ಆಡಳಿತಾರೂಢ ಆಮ್ ಆದ್ಮಿ ಪಕ್ಷದ ದಿಲ್ಲಿ ಸರಕಾರ ವಿದ್ಯುತ್ ಶುಲ್ಕವನ್ನು ಅರ್ಧದಷ್ಟು ಕಡಿಮೆ ಮಾಡಿರುವ ಬೆನ್ನಲ್ಲೇ, ದಿಲ್ಲಿ ವಿದ್ಯುತ್ ನಿಯಂತ್ರಣ ಮಂಡಳಿಯು ವಿದ್ಯುತ್ ಶುಲ್ಕ ಹೆಚ್ಚಳ ಮಾಡಿದೆ. ಪ್ರತಿ ಯೂನಿಟ್‌ನ ದರವನ್ನು ಶೇ. 6-8ರವರೆಗೆ ಹೆಚ್ಚಿಸಲಾಗಿದ್ದು, ಇದು ಶನಿವಾರದಿಂದಲೇ ಜಾರಿಯಾಗುತ್ತಿದೆ. ವಿದ್ಯುತ್ ನಿಯಂತ್ರಣ ಮಂಡಳಿಯ ವಿರುದ್ಧ ಕೇಜ್ರಿವಾಲ್ ಸರಕಾರ ಕಿಡಿಕಾರಿದ್ದು, ಶುಲ್ಕ ಏರಿಕೆಯನ್ನು ಖಂಡಿಸಿದೆ.**

## ಜನ ಸಮ್ಮುಖ ಲೋಕಪಾಲ

ಜನ ಲೋಕಪಾಲ್ ವಿಧೇಯಕ ಜಾರಿಗಾಗಿ ಫೆ.16ರಂದು ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ವಿಶೇಷ ಅಧಿವೇಶನ ನಡೆಸಲು ಆಪ್ ಸರಕಾರ ಶುಕ್ರವಾರ ನಿರ್ಧರಿಸಿದೆ. ಈ ಮೊದಲು ರಾಮಲೀಲಾ ಮೈದಾನವನ್ನು ಬಳಸಿಕೊಳ್ಳುವುದಾಗಿ ಆಪ್ ಹೇಳಿತ್ತು. ಫೆ.13ರಿಂದ 16ರ ತನಕ ವಿಧಾನಸಭೆ ಅಧಿವೇಶನ ನಡೆಯಲಿದ್ದು, ಕಡೆಯ ದಿನ ಅಧಿವೇಶನವು ಕ್ರೀಡಾಂಗಣದಲ್ಲಿ ನಡೆಯಲಿದೆ.

1/2/14